ಅದರ ಉದಾಹರಣೆ ಕೊಡುವುದಾದರೆ, ನಿಮಗೆ ಎಂ.ಐ.ಜಿ.-2 ಮನೆಯು ಹೆಬ್ಬಾಳ ಬಡಾವಣೆಯಲ್ಲಿ ಮಂಜೂರಾಗಿದ್ದು ಇದರ ಬಾಬ್ತು ಪೂರ್ತಿ ಹಣ ಬಂದಿದ್ದು ಲೆಕ್ಕಶಾಖೆಯ ಅಭಿಪ್ರಾಯದಂತೆ ಪೂರ್ಣ ಹಣ ಸಂದಾಯವಾಗಿದೆಯೆಂದು ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡಲಾಗಿದೆ. ಸುಮಾರು ಎಂಟು ಸಾವಿರ ಜನರಿಗೆ ಆ ರೀತಿ ಕ್ಲಿಯರೆನ್ಸ್ ಸರ್ಟಿಫಿಕೇಟನ್ನು ಕೊಟ್ಟಿದ್ದಾರೆ. ಈ ಸರ್ಕಾರ ಬಂದಮೇಲೆ ಅವರೆಲ್ಲರಿಗೂ ಸಹ 30 ಸಾವಿರ ಹಣವನ್ನು ಕಟ್ಟಿ ಎಂದು ನೋಟೀಸ್ ಕೊಟ್ಟಿದ್ದಾರೆ. ಇದರ ಮೊತ್ತ 36 ಕೋಟಿ. ಇಲ್ಲಿ ಅವ್ಯವಹಾರ ಆಗಿಲ್ಲವೆಂದು ಹೇಳಿದರು, ಆದರೆ ಪತ್ರಿಕೆಯಲ್ಲಿ ಬಂದಿರುವ ವಿಚಾರವೇನೆಂದರೆ, ಸ್ವಂತ ಮನೆ ಹೊಂದಿ ಯೋಜನೆಯ ವಿಚಾರಕ್ಕೆ ವಿಷಾದ ವರದಿ ನೀಡಲು ಅರ್ಥ ಸಚಿವರ ಆದೇಶ ಎಂದು ಬಂದಿದೆ. ಅದರಲ್ಲಿ ಅಕ್ರಮ ನಡೆದಿದೆ, ಮಾನ್ಯ ಉಪಮುಖ್ಯಮಂತ್ರಿಯವರು ಮೈಸೂರಿಗೆ ಬಂದಾಗ ಇದರ ಬಗ್ಗೆ ತನಿಖೆ ಮಾಡಲು ಆದೇಶವನ್ನು ಕೊಟ್ಟರು. ಇದುವರೆಗೆ ವಿಚಾರಣೆ ಮಾಡಿ ವರದಿ ಕೊಟ್ಟಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಸದಸ್ಯರು ಈ ಕಡತವನ್ನು ತಮ್ಮ ಬಳಿ ತರುತ್ತಾರೆ, ಅವರೊಂದಿಗೆ ಕುಳಿತು ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ಅವರು ಬರಲಿ, ಮೂಡಾದ ಹಿತದೃಷ್ಟಿಯಿಂದ ಏನು ಬೇಕಾದರೂ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ಕ್ಲಿಯರೆನ್ಸ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಮತ್ತೆ ಹೊಸದಾಗಿ ಹಣವನ್ನು ಕೊಡಬೇಕೆಂದು ಹೇಳುತ್ತಿರುವುದು ಸರಿಯಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ತಾವು ಮಾನ್ಯ ಸಚಿವರಿಗೆ ಆ ಮಾಹಿತಿಯನ್ನೆಲ್ಲಾ ಕೊಟ್ಟು ಚರ್ಚೆ ಮಾಡಿ. ಆಗಲೂ ತಮಗೆ ತೃಪ್ತಿಯಾಗದಿದ್ದರೆ ನ್ಯಾಯಾಂಗ ತನಿಖೆಗೋ, ಮತ್ತೊಂದಕ್ಕೋ ಒತ್ತಾಯ ಮಾಡೋಣ. ಮೂಡಾದ ಮತ್ತು ಫಲಾನುಭವಿಗಳ ಹಿತದೃಷ್ಟಿಯಿಂದ ತಾವು ಮತ್ತು ಸಚಿವರು ಕುಳಿತು ಚರ್ಚೆ ಮಾಡಿ, ಅನಂತರ ಏನಾದರೂ ಮಾಡೋಣ.

(ಗೊಂದಲ)

ಉಪಾಧ್ಯಕ್ಷರು: ಇಲ್ಲಿಗೆ ಇದರ ಬಗ್ಗೆ ಚರ್ಚೆ ಮುಕ್ತಾಯವಾಯಿತು. ಈಗ ಪ್ರಕಟಣೆ.

ಪ್ರಕಟಣೆ

ಉಪಾಧ್ಯಕ್ಷರು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವ್ಯವಸ್ಥಾಪಕ ಮಂಡಳಿಯ ಎರಡು ಸದಸ್ಯ ಸ್ಥಾನಗಳನ್ನು ಭರ್ತಿ ಮಾಡಬೇಕಾಗಿದ್ದು, ಈ ಎರಡೂ ಸ್ಥಾನಗಳ ಸಂಖ್ಯೆಗೆ ಸಮನಾಗಿ ಮಾನ್ಯ ಸದಸ್ಯರುಗಳಿಂದ ನಾಮಪತ್ರಗಳು ಬಂದಿರುವುದರಿಂದ, ವಿಧಾನ ಸಭೆಯಿಂದ ರಾಜ್ಯ ಮುಕ್ತ

ವಿಶ್ವವಿದ್ಯಾನಿಲಯದ ವ್ಯವಸ್ಥಾಪಕ ಮಂಡಳಿಗೆ ವಿಧಾನ ಸಭಾ ಸದಸ್ಯರಾದ ಶ್ರೀ ಎಂ. ಪಿ.ಕರ್ಕಿ ಹಾಗೂ ಶ್ರೀ ವಿ.ಆರ್. ಕೃಷ್ಣಮೂರ್ತಿ ಇವರುಗಳು ಚುನಾಯಿತರಾಗಿರುತ್ತಾರೆಂದು ಘೋಷಿಸುತ್ತೇನೆ.

ಈಗ ಸದನವನ್ನು ನಾಳೆ 9-30 ರವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6-50ಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 17ರ ಶುಕ್ರವಾರ ಬೆಳಿಗ್ಗೆ 9-30ಕ್ಕೆ ಸೇರಲು ನಿಶ್ಚಯಿಸಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)